**ಸಾಕ್ಷಿಗೆ ದಿನಾಂಕ 18.12.2025 ರಂದು -ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: 1 ನೇ ಎದುರುದಾರರ ಪರ ಶ್ರೀ ಎಸ್ ಕೆ ವಕೀಲರಿಂದಃ**

1. ನಾನು ಈ ಪ್ರಕರಣದಲ್ಲಿ, 1 ನೇ ಎದುರುದಾರನಾಗಿರುತ್ತೇನೆ. ನನ್ನ ಮುಖ್ಯ ವಿಚಾರಣೆ ಸಾಕ್ಷ್ಯಕ್ಕೆ ಸಂಬಂಧಿಸಿದಂತೆ, ನಾನು ಈ ದಿನ ಪ್ರಮಾಣ ಪತ್ರವನ್ನು ಸಲ್ಲಿಸುತ್ತಿದ್ದೇನೆ. ಅದರಲ್ಲಿರುವ ಅಂಶಗಳು ಸತ್ಯವಾಗಿರುತ್ತವೆ. ಅದನ್ನು ನಾನು ಓದಿ ತಿಳಿದುಕೊಂಡು ಸಹಿಮಾಡಿರುತ್ತೇನೆ.

2. ನಾನು ಈ ಪ್ರಕರಣದಲ್ಲಿ ತೆಗೆದುಕೊಂಡಿರುವ ಪ್ರತಿರಕ್ಷೆಗೆ ಸಂಬಂಧಿಸಿದಂತೆ ಈ ಕೆಳಕಂಡ ಧೃಢಿಕೃತ ದಾಖಲೆಗಳನ್ನು ಹಾಜರು ಮಾಡುತ್ತಿದ್ದೇನೆ. ಸಾಕ್ಷಿಹಾಜರು ಮಾಡಿದ ದಾಖಲಾತಿಗಳನ್ನು ಈ ಕೆಳಕಂಡಂತೆ ನಿಶಾನಿಕರಿಸಲಾಗಿರುತ್ತದೆ.:

| | |
|---|---|
| ನಿ.ಅರ್ 3 | ನೀರು ಸರಬರಾಜು ಮಂಜುರಾತಿ ಪತ್ರದ ದೃಢೀಕೃತ ಪ್ರತಿ |

3. ನನ್ನ ಮುಖ್ಯ ವಿಚಾರಣಾ ಸಾಕ್ಷಾ ಹಾಗೂ ದಾಖಲಾತಿಗಳನ್ನು ಪರಿಶೀಲಿಸಿ ಅರ್ಜಿದಾರರ ಅರ್ಜಿಯನ್ನು ವಜಾ ಮಾಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

**ಪಾಟೀಸವಾಲುಃ ಅರ್ಜಿದಾರರ ಪರ ಶ್ರೀ ಬಿ ಬಿ ಎ ವಕೀಲರಿಂದಃ**

1. ನಾನು ಟ್ರಾಕ್ಟರ್ ನ ಮಾಲೀಕನಾಗಿರುತ್ತೇನೆ. ನನ್ನ ಟ್ರಾಕ್ಟರ್ ಚಾಲಕನ ವಿರುದ್ಧ ಕುಮಾರ್ ಕೆ ಬಿ ಎನ್ನುವವರು ಅಪಘಾತದ ಕುರಿತು ದೂರು ನೀಡಿರುತ್ತಾರೆ ಎಂದರೆ ಸುಳ್ಳು ದೂರು ನೀಡಿರುತ್ತಾರೆ. ಸದರಿ ದೂರನ್ನು ಸುಳ್ಳಾಗಿ ನೀಡಿರುತ್ತಾರೆ ಎಂದು ಸಾಬೀತು ಪಡಿಸಲು ನನ್ನ ಬಳಿ ಯಾವುದೇ ದಾಖಲೆ ಇಲ್ಲ ಎಂದರೆ ಕುಮಾರ್ ಕೆ ಬಿ ಎನ್ನುವವರು ಸ್ಥಳದಲ್ಲಿ ಇರಲಿಲ್ಲ. ಹೊಸನಗರ ಪೊಲೀಸ್ ಠಾಣೆಯವರು ನನ್ನ ಟ್ರಾಕ್ಟರ್ ಮತ್ತು ಚಾಲಕನ ವಿರುದ್ಧ ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತಾರೆ ಎಂದರೆ ಸುಳ್ಳಾಗಿ ಹಾಕಿರುತ್ತಾರೆ. ಮೃತ ತುಕರಾಮ್ ರವರು ಅಪಘಾತದ ದಿನ ಮದ್ಯಪಾನ ಮಾಡಿದ್ದರು ಎಂದು ತೋರಿಸಲು ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿ. ಪರಿಹಾರ ನೀಡುವ ಬಾಧ್ಯತೆಯಿಂದ

ತಪ್ಪಿಸಿಕೊಳ್ಳುವ ಸಲುವಾಗಿ ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ 2 ನೇ ಎದುರುದಾರರ ಪರ ಶ್ರೀ ಜಿ ಎಸ್ ವಕೀಲರಿಂದಃ**

1. ನಿಪಿ.3 ರ ಪ್ರಕಾರ ಪೊಲೀಸರು ಅಶೋಕ ಬಿನ್ ಶೇಖರಪ್ಪ ಮತ್ತು ನನ್ನ ವಿರುದ್ಧ ದೋಷಾರೋಪಣಾಪಟ್ಟಿ ಸಲ್ಲಿಸಿರುತ್ತಾರೆ ಎಂದರೆ ಸರಿ. ಅಪಘಾತದ ದಿನದಂದು ಅಶೋಕರವರಿಗೆ ಟ್ರಾಕ್ಟರ್ ಚಾಲನೇ ಮಾಡಲು ಡಿಎಲ್ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಅಪಘಾತದ ನಂತರ ಪೊಲೀಸರು ನನ್ನನ್ನು ದಾಖಲೆಗಳನ್ನು ಹಾಜರುಪಡಿಸುವಂತೆ ಕೋರಿ ಕರೆದಿದ್ದರು ಎಂದರೆ ಸರಿ. ಆ ಸಮಯದಲ್ಲಿ ಪೊಲೀಸರಿಗೆ ಅಶೋಕರವರ ಡಿಎಲ್ ಹಾಜರಪಡಿಸಿಲ್ಲ ಎಂದರೆ ಸರಿ. ಅಶೋಕನಿಗೆ ಅಪಘಾತದ ದಿನದಂದು ಟ್ರಾಕ್ಟರ್ ಚಾಲನೇ ಮಾಡಲು ಡಿಎಲ್ ಇಲ್ಲ ಎಂಬುದು ತಿಳಿದಿದ್ದರೂ ಸಹ ಟ್ರಾಕ್ಟರ್ ಚಾಲನೇ ಮಾಡಲು ನೀಡಿರುತ್ತೇನೆ ಎಂದರೆ ಸರಿಯಲ್ಲ.

2. ಕೆಎ-35-ಟಿಬಿ-6163 ಟ್ರಾಕ್ಟರ್ ನನ್ನ ಹೆಸರಿಗೆ ಇರುತ್ತದೆ ಎಂದರೆ ಸರಿ. ಮುನಿನಂಜಪ್ಪ ರವರು ಕೆಎ-35-ಟಿಬಿ-6163 ಟ್ರಾಕ್ಟರ್ ನ ಮೊದಲ ಮಾಲೀಕರಾಗಿರುತ್ತಾರೆ. ನಾನು ಅವರಿಂದ ಸದರಿ ಟ್ರಾಕ್ಟರ್ ನ್ನು ಖರೀದಿಸಿದ್ದೆ ಎಂದರೆ ಸರಿ. ಅಪಘಾತದ ಕಾಲಕ್ಕೆ ಟ್ರಾಕ್ಟರ್ ನನ್ನ ಹೆಸರಿಗೆ ವರ್ಗಾವಣೆಗೊಂಡಿತ್ತು ಆದರೆ ವಿಮಾ ಪಾಲಿಸಿ ವರ್ಗಾವಣೆಯಾಗಿರುವುದಿಲ್ಲ ಎಂದರೆ ಸರಿ. ಟ್ರಾಕ್ಟರ್ ಆರ್ ಸಿ ಮತ್ತು ವಿಮಾ ಪಾಲಿಯ ಪ್ರಕಾರ ಟ್ರಾಕ್ಟರ್ ನ್ನು ಕೃಷಿ ಚಟುವಟಿಕೆಗೆ ಮಾತ್ರ ಬಳಸಬೇಕು ಎಂದರೆ ಸರಿ.

3. ಕೆಎ-35-ಟಿಬಿ-6163 ಟ್ರಾಕ್ಟರ್ ನ್ನು ಒಂದು ಲೋಡ್ ನೀರಿಗೆ 630/- ನಂತೆ ಮೂಡಗೊಪ್ಪ ಗ್ರಾಮ ಪಂಚಾಯಿತಿಯಿಂದ ಟೆಂಡರ್ ಪಡೆದಿದ್ದೆ ಎಂದರೆ ಟ್ಯಾಂಕರ್ ನ್ನು ಬಾಡಿಗೆಗೆ ನೀಡಿರುತ್ತೇನೆ. ಸದರಿ ನೀರಿನ ಟ್ಯಾಂಕರ್ ಕೆಎ-35-ಟಿಬಿ-6163 ಟ್ರಾಕ್ಟರ್ ಜೊತೆಗೆ ಅಳವಡಿಸಿದ್ದೇನು ಎಂದೆರ ಸರಿ. ಅಪಘಾತವು ಸದರಿ ಟ್ಯಾಂಕರ್ ನ ಮೂಲಕ ಮನೆಗೆ ಮನೆಗೆ ನೀರು ಸರಬರಾಜು

ಮಾಡುವಾಗ ಆಗಿದೆ ಎಂದರೆ ಸರಿ. ಕೆಎ-35-ಟಿಬಿ-6163 ಟ್ರಾಕ್ಟರ್ ಗೆ ಪಡೆದ ವಿಮೆ ಪಾಲಿಸಿಯ ಪ್ರಕಾರ ವಿಮಾ ಪಾಲಿಸಿಯ ಷರತ್ತು ಮತ್ತು ನಿಬಂಧನೆಗಳ ಉಲ್ಲಂಘನೆಯಾದರೆ ವಿಮಾ ಕಂಪನಿ ಪರಿಹಾರ ನೀಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ.

**ಮರು-ವಿಚಾರಣೆಃ ಇಲ್ಲ.**

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ.)**

**(ಓ. ಹೇ. ಕೇ. ಸ.ಇ)**

**3ನೇ ಹೆಚ್ಚುವರಿ ಲಘು ವ್ಯವಹಾರಗಳ**
**ನ್ಯಾಯಾಧೀಶರು, ಬೆಂಗಳೂರು.**